**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: **2014-15ನೇ** ಸಾಲಿಗೆ ಸಂಬಂಧಿಸಿದಂತೆ **13ನೇ ಹಣಕಾಸು ಆಯೋಗದಡಿ** ಅನುಮೋದಿತ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: F10(1)FCD 2009-40SSG-S 1906-14, ದಿನಾಂಕ:13.03.2015.
2. Credit conformation slip dated:24.03.2015.

-

ಪ್ರಸ್ತಾವನೆ

**13ನೇ ಹಣಕಾಸು ಆಯೋಗವು** ಫ್ಲೋರೈಡ್ ಬಾಧಿತ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಹಾಗೂ ಸುರಕ್ಷಿತ ಕುಡಿಯುವ ನೀರು ಪೂರೈಕೆ ಮಾಡಲು **2011-2012ನೇ** ಸಾಲಿನಿಂದ **2014-2015ನೇ** ಸಾಲಿನವರೆಗೆ **ರೂ.300ಕೋಟಿಗಳನ್ನು** ಒದಗಿಸಿದೆ. ರಾಜ್ಯದಲ್ಲಿ ಅತಿ ಶೋಷಿತ ಹಾಗೂ ನೀರಿನ ಗುಣಮಟ್ಟದ ತೀವ್ರ ಸಮಸ್ಯೆಗೊಳಗಾಗಿರುವ **7** ಜಿಲ್ಲೆಗಳಲ್ಲಿನ **2223** ಜನವಸತಿಗಳಿಗೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರನ್ನು ಪೂರೈಸಲು ಕ್ರಿಯಾ ಯೋಜನೆಯನ್ನು ಈಗಾಗಲೇ ಅನುಮೋದಿಸಲಾಗಿದೆ.

ಈ ಕ್ರಿಯಾ ಯೋಜನೆಯನ್ವಯ ಈಗಾಗಲೇ **2011-2012ನೇ ಸಾಲಿನಿಂದ 2013-14ನೇ ಸಾಲಿನ** ವರೆಗೆ **ರೂ.225.00ಕೋಟಿ** ವರ್ಷವಾರು ಅನುಮೋದಿತ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಮುಂದುವರಿದು ಕೇಂದ್ರ ಸರ್ಕಾರವು ಮೇಲೆ (1)ರಲ್ಲಿ ಓದಲಾದ ಪತ್ರದನ್ವಯ **2014-15ನೇ** ಸಾಲಿಗೆ **ರೂ.45.00ಕೋಟಿ** ಬಿಡುಗಡೆ ಮಾಡಿದೆ. ಈ ಅನುದಾನ ರಾಜ್ಯದ ಬೊಕ್ಕಸಕ್ಕೆ ದಿನಾಂಕ:24.03.2015ರಂದು ಜಮೆಯಾಗಿದೆ. ಸದರಿ ಅನುದಾನವನ್ನು ಉದ್ದೇಶಿತ ಹಾಗೂ ಅನುಮೋದಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಾಗಿದೆ. **ರೂ.45.00ಕೋಟಿ** ರಾಜ್ಯ ಹುಜೂರ್ ಖಜಾನೆಯಿಂದ ಗೊತ್ತುಪಡಿಸಲಾದ ರಾಷ್ಟ್ರೀಕೃತ ಬ್ಯಾಂಕ್‌ಗಳ ಮುಖೇನ ವಿನಿಯೋಗಿಸಲು ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 43 ಗ್ರಾನೀಸ(8)2014, ಬೆಂಗಳೂರು ದಿನಾಂಕ 27.03.2015**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2014-15ನೇ** ಸಾಲಿಗೆ ಸಂಬಂಧಿಸಿದಂತೆ, ಕೇಂದ್ರವಲಯದಡಿ **ರೂ.45.00ಕೋಟಿ (ನಲವತ್ತೈದು ಕೋಟಿ ರೂಪಾಯಿಗಳು ಮಾತ್ರ)** ಅನುದಾನವನ್ನು ಆಯುಕ್ತರು ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರಿಗೆ ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳ ಅನುಷ್ಠಾನಕ್ಕೆ ಬಿಡುಗಡೆ ಮಾಡಲು ಸರ್ಕಾರ ಹರ್ಷಿಸುತ್ತದೆ.

2. ಸದರಿ ಕೇಂದ್ರವಲಯದ ಅನುದಾನವನ್ನು Payees Receipt ಮೇಲೆ ಆಯುಕ್ತರು ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರ್ ಖಜಾನೆಯಿಂದ ಡ್ರಾ ಮಾಡಿ ಈ ಯೋಜನೆ ಸಂಬಂಧ ಈಗಾಗಲೇ ತೆರೆದಿರುವ **SB ಖಾತೆ ಸಂಖ್ಯೆ: 10686101007745** ಮತ್ತು **IFSC code: : PKGB0010686,** ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್, ಗಾಂಧಿನಗರ, ಬಳ್ಳಾರಿಗೆ **ರೂ.20.00ಕೋಟಿ,** ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಧಾರವಾಡಕ್ಕೆ **ರೂ.25.00ಕೋಟಿ, SB ಖಾತೆ ಸಂಖ್ಯೆ: 89037300669 IFSC code:KVGB0004005ಗೆ** ಜಮೆ ಮಾಡಿ ಈಗಾಗಲೇ ಮಂಜೂರು ಮಾಡಿರುವ ಯೋಜನೆಗಳಿಗಾಗಿ ವಿನಿಯೋಗಿಸಲು ಜಿಲ್ಲಾ ಪಂಚಾಯತಿಗಳು ತಕ್ಷಣ ವ್ಯವಸ್ಥೆ ಮಾಡತಕ್ಕದ್ದು.

...2

3. ಈ ಅನುದಾನವನ್ನು ಚಾಲ್ತಿ ಮಾರ್ಗಸೂಚಿಗಳನ್ವಯ **13ನೇ ಹಣಕಾಸು ಆಯೋಗದ** ಅನುಮೋದಿತ ಕ್ರಿಯಾ ಯೋಜನೆಯ ಕಾಮಗಾರಿಗಳಿಗಾಗಿ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದುಕೊಂಡು ಸರ್ಕಾರವು ಗೊತ್ತುಪಡಿಸಿರುವ ಬ್ಯಾಂಕ್‌ಗಳ ಮೂಲಕ ಅನುದಾನ ವಿನಿಯೋಗಿಸಲು ಅಧಿಕಾರ ಹೊಂದಿರುತ್ತವೆ.

4. CE, RDWSD / ಜಿಲ್ಲಾ ಪಂಚಾಯತಿಗಳು ಈ ವೆಚ್ಚವನ್ನು **ಲೆಕ್ಕ ಶೀರ್ಷಿಕೆ 2215-ನೀರು ಸರಬರಾಜು ಮತ್ತು ನೈರ್ಮಲ್ಯ ಮೇಲಣ ವೆಚ್ಚ-01-ನೀರು ಸರಬರಾಜು-196-ಜಿಲ್ಲಾಮಟ್ಟದ ಪಂಚಾಯತಿಗಳಿಗೆ ನೆರವು-2-ಜಿಲ್ಲಾ ಪಂಚಾಯಿತಿಗಳು -01-ಬ್ಲಾಕ್ ಅನುದಾನ -300-ಒಟ್ಟು ಜಿಲ್ಲಾ ಪಂಚಾಯತಿಗಳು (ಯೋಜನೆ) 2013-14ರಡಿ** ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು. (2215-01-196-2-01 ZPs-300 lump sum -ZP)

**5.** ಈ ಆದೇಶವನ್ನು **2014-15ನೇ** ಸಾಲಿಗೆ ಮುಂದುವರಿದ ಮತ್ತು ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳ ಅನುಷ್ಠಾನ ಸಲುವಾಗಿ ಯೋಜನೆಗಳನ್ನು ಮುಂದುವರಿಸಲು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಸಹಮತಿ ಸಂಖ್ಯೆ : **ಆದೇಶ ಸಂಖ್ಯೆ:ಗ್ರಾಅಪ 153 ಎಎಫ್ಎನ್ 2014, ದಿನಾಂಕ:01.04.2014ರನ್ವಯ** ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

27/3/15

(ರಾಮಕೃಷ್ಣ)
ಸರ್ಕಾರದ ಉಪಕಾರ್ಯದರ್ಶಿ(ಗ್ರಾನೀಸ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಫೋನ್ & ಫ್ಯಾಕ್ಸ್: 080- 22233175
ಇ-ಮೇಲ್: rk3452000@gmail.com

ಗೆ:

1. ಮಹಾಲೇಖಪಾಲರು, (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (G&SSA) ಕರ್ನಾಟಕ, New Building, Audit Bhavan ಬೆಂಗಳೂರು.
3. ಮಹಾಲೇಖಪಾಲರು, (E&RSA) ಕರ್ನಾಟಕ, New Building, Audit Bhavan ಬೆಂಗಳೂರು.
4. ಉಪ ಮಹಾಲೇಖಪಾಲರು, ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಬಳ್ಳಾರಿ, ದಾವಣಗೆರೆ, ತುಮಕೂರು, ಕೋಲಾರ.**
6. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ವೃತ್ತ ಬೆಂಗಳೂರು-09
7. ಮುಖ್ಯ ಲೆಕ್ಕಾಧಿಕಾರಿಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ವೃತ್ತ ಬೆಂಗಳೂರು-09
8. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಉಪ ನಿರ್ದೇಶಕರು, Net Work Management Center, No.49 ಖನಿಜ ಭವನ, ರೇಸ್‌ಕೋರ್ಸ್ ರಸ್ತೆ , ಬೆಂಗಳೂರು.
10. ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್, ಗಾಂಧಿನಗರ,ಬಳ್ಳಾರಿ.
11. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಧಾರವಾಡ.
12. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ, " ಕರ್ನಾಟಕ ವಿಕಾಸ " ಗ್ರಾಅಪಂರಾಜ್ ಇಲಾಖೆ
13. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು)
14. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ)
15. ವಿಶೇಷಾಧಿಕಾರಿ, ಗಣಕ ಕೋಶ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
16. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ, ಕಟ್ಟಡ, ಬೆಂಗಳೂರು.
5. ಸರ್ಕಾರದ ಜಂಟಿ ಕಾರ್ಯದರ್ಶಿಗಳು,. ಆರ್ಥಿಕ ಇಲಾಖೆ, (ಆಅಕೋ), ವಿಧಾನಸೌಧ, ಬೆಂಗಳೂರು.
6. ಇಲಾಖೆಯ ಎಲ್ಲಾ ನಿರ್ದೇಶಕರು/ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
8. ನಿರ್ದೇಶಕರು(SWSM) ಹಾಗೂ ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.